





# ಮೊಟ್ಟೆ ಕಲೆ!

**ಕ**ಲೆಗೆ ಇಂತಹದ್ದೇ ಕ್ಯಾನ್‌ವಾಸ್ ಬೇಕೆಂದಿಲ್ಲ. ಹಾಗೆಯೇ ಇಂತಹದ್ದೇ ಮೂಲವಸ್ತುಗಳು ಬೇಕೆಂದೂ ಇಲ್ಲ. ಕಲೆ ಎಲ್ಲೆಂದರಲ್ಲಿ ಅರಳುತ್ತದೆ; ಹಾಗೆಯೇ ಅರಳಿಸಬಹುದು. ಕಲೆಯನ್ನು ಅರಳಿಸುವ ಹೊಸ ಹೊಸ ಮಾಧ್ಯಮಗಳಿಗಾಗಿ ಕಲಾವಿದ ಸದಾ ಹುಡುಕಾಡುತ್ತಲೇ ಇರುತ್ತಾನೆ. ಕೈಗೆ ಸಿಕ್ಕಿದ್ದಕ್ಕೆಲ್ಲಾ ಬೇರೆಯದೇ ರೂಪವನ್ನು ಕೊಡಲು ನಿರಂತರ ಪರಿಶ್ರಮ ನಡೆಸುತ್ತಾನೆ.

ಇಲ್ಲಿ ನೋಡಿ, ಬೇಯಿಸಿ ತಿನ್ನುವ ಮೊಟ್ಟೆಗೆ ಪೆನ್ಸಿಲ್ಲು, ಬಣ್ಣ ಬಳಸಿ ನಾಜೂಕುಗೊಳಿಸಿದ್ದಾರೆ ಯಾರೋ ಪುಣ್ಯಾತ್ಮರು. ಮೊಟ್ಟೆ ಸಸ್ಯಾಹಾರಿಯೋ ಮಾಂಸಹಾರಿಯೊ ಎಂಬ ಜಿಜ್ಞಾಸೆಯಲ್ಲಿ ಎಷ್ಟೋ ಜನ ಮೊಟ್ಟೆ ಸೇವನೆಯಿಂದ ದೂರವೇ ಇರುವುದು ಬೇರೆ. ಕದ್ದು ಮುಚ್ಚಿ ತಿನ್ನುವವರ ಸಂಖ್ಯೆಯೂ ಸಾಕಷ್ಟು ಇದೆಯೆನ್ನಿ!

ಈಗಂತೂ ಮೊಟ್ಟೆಯನ್ನು ಹೀಗೆಲಶ್ಟ ಮಾಡಿ ರಂಗು ರಂಗಾಗಿಸಿದರೆ ಯಾರಿಗೆ ತಾನೇ ತಿನ್ನಲು ಮನಸ್ಸಾದೀತು ಹೇಳಿ? ಮನೆಯ ಷೋಕೇಸಿನಲ್ಲಿ ಒಂದೆರಡು ದಿನ ಇಟ್ಟು ಸೊಬಗು ಸವಿಯಬಹುದು. ಜಾಸ್ತಿ ದಿನ ಇಟ್ಟು ಬಣ್ಣದ ಮರಿ ಹುಟ್ಟಿದರೆ ಚಿತ್ತಾರ ಮಾಡಿದವರನ್ನು ಬಯ್ಯಬೇಡಿ!

–ಎನ್ವೀ. ವೈದ್ಯ ಹೆಗ್ಗಾರ್